ಓ ಎಸ್ 81/2022 ಡಿ.ಡಬ್ಲೂಃ 1

**ಸಾಕ್ಷಿಯನ್ನು ದಿಃ 27.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ–**

ನಿಡಿ. 1 ರ ಕ್ರಯ ಪತ್ರದಲ್ಲಿ ಪೂರ್ವಕ್ಕೆ ಸರ್ವೆ ನಂ. 49/1 ಅಥವಾ 2 ರ ಜಮೀನು ಇದೆ. ಸದರಿ ಜಮೀನು ದಿಃ 07.08.1997 ರಲ್ಲಿ ಖರೀದಿ ಮಾಡಿರುತ್ತೇನೆ. ಪಶ್ಚಿಮಕ್ಕೆ ಇರುವಂತಹ ನನ್ನ ಜಮೀನು ಸರ್ವೆ ನಂ. 51 ಆಗಿರುತ್ತದೆ. ಅದನ್ನು ಕೂಡ ದಿಃ 07.08.1997 ರಲ್ಲಿ ಖರೀದಿ ಮಾಡಿರುತ್ತೇನೆ. ದಕ್ಷಿಣಕ್ಕೂ ಸಹ ನನ್ನ ಜಮೀನು ಎಂದು ಹೇಳಿದ್ದು, ಸರ್ವೆ ನಂ. 49/1 ಅಥವಾ 2 ಇದ್ದು, ನಿಖರವಾಗಿ ಯಾವಾಗ ಖರೀದಿ ಮಾಡಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನಿಡಿ. 1 ಮತ್ತು ನಿಪಿ. 53 ಕ್ರಯ ಪತ್ರಗಳನ್ನು ಕಂಪ್ಯೂಟರ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆದ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ನಿಡಿ. 1 ಮತ್ತು ನಿಪಿ. 53 ರ ಕ್ರಯ ಪತ್ರಗಳಲ್ಲಿ ಟೈಪ್ ಮಾಡಿದ ಫಾಂಟ್ ಸೈಜ್ ಮತ್ತು ಬರೆದಂತಹ ವಿಷಯಗಳು 1997 ರ ಇಸವಿಯದಲ್ಲ ಎಂದರೆ ಸಾಕ್ಷಿ ಇರಬಹುದು, ನನಗೆ ಗೊತ್ತಿಲ್ಲ ಎನ್ನುತ್ತಾರೆ. 1997 ರ ಸಾಲಿನಲ್ಲಿ ಆತರಹದ ವಿಚಾರಗಳಿಂದ ಕೂಡಿದ ಕ್ರಯ ಪತ್ರ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

1997 ರಲ್ಲಿ ಕ್ರಯ ಪತ್ರಗಳು ಕನ್ನಡದಲ್ಲಿ ಮಾತ್ರ ತಯಾರು ಆಗುತ್ತಿದ್ದವು ಎಂದರೆ ಸಾಕ್ಷಿ ಇದ್ದಿರಬಹುದು ಎಂದು ನುಡಿದು ನಂತರ ಮಾರಾಟ ಗಾರರು ಅದನ್ನು ಇಂಗ್ಲೀಷ್ ನಲ್ಲಿ ಭಾಷಾಂತರಿಸಿಕೊಡಿ ಎಂದು ಹೇಳಿದ ಕಾರಣ ಆ ರೀತಿ ಭಾಷಾಂತರಿಸಲಾಯಿತು ಎನ್ನುತ್ತಾರೆ. 1997 ರಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಯ ಹತ್ತಿರ ಬೆರಳಚ್ಚು ಇದ್ದು, ಸಾಮಾನ್ಯವಾಗಿ ದಾಖಲೆಗಳನ್ನು ಬೆರಳಚ್ಚು ಮಾಡಿಸಲಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1997 ನೆ ಸಾಲಿನಲ್ಲಿ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ಮಾಡಿ ತೆಗೆಯುವ ವ್ಯವಸ್ಥೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ. 1 ಕ್ರಯ ಪತ್ರದ ನಕಲು ಪ್ರತಿ ಎಂದು ಹಾಜರು ಪಡಿಸಿದ್ದು, ನಿಡಿ. 53 ರ ಅಸಲು ಕ್ರಯ ಪತ್ರ ಇದ್ದು, ನಿಡಿ. 1 ನಿಡಿ. 53 ರ ದೃಡೀಕೃತ ಪ್ರತಿ ಆಗಿರುವುದಿಲ್ಲ. ನಾನು ಹಾಜರು ಪಡಿಸಿರುವಂತಹ ನಿಡಿ. 1 ರ ಪ್ರತಿ ಪುಟದಲ್ಲಿ ಸ್ಟಾಂಪ್ ಇರುವ ಕಡೆ ಖಾಲಿ ಇದೆ ಎಂದರೆ ಸರಿ. ಸದರಿ ನಿಡಿ. 1 ರ ಸದರಿ ಪುಟದಲ್ಲಿ ಎಷ್ಟು ರೂ. ಸ್ಟಾಂಪ್ ಎಂದು ಕೂಡ ಕಾಣಿಸುತ್ತಿಲ್ಲ ಎಂದರೆ ಸರಿ.

ನಿಡಿ. 1 ಮತ್ತು ನಿಡಿ. 53 ರಲ್ಲಿ ಮಾರಾಟಗಾರರ ಸಹಿಗಳು ಒಂದಕ್ಕೊಂದು ವ್ಯತ್ಯಾಸ ಇದೆ ಎಂದರೆ ಸರಿ. ನಿಡಿ. 53 ರ ಕ್ರಯಪತ್ರದಲ್ಲಿ ಕೈ ಬರಹದ ಬರವಣಿಗೆ ಮತ್ತು ಅಂಡರ್ಲೈನ್ ಇದ್ದು ಯಾವ ಕಾಲದಲ್ಲಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕೈ ಬರಹದ ಬರವಣಿಗೆ ಮತ್ತು ಅಂಡರ್ ಲೈನ್ ಗಳನ್ನು ದಾಖಲೆ ರಿಜಿಸ್ಟ್ರೇಶನ್ ಸಮಯದಲ್ಲಿ ಮಾಡಲಾಗಿದೆ. ನಿಡಿ. 53 ರ ಪ್ರತಿ ಪುಟದಲ್ಲಿ ಸಬ್ ರಿಜಿಸ್ಟ್ರರ್ ರವರ ಸಹಿ ಇಲ್ಲ ಎಂದರೆ ಆ ಸಮಯದಲ್ಲಿ ಏನು ಮಾಡುತ್ತಿದ್ದರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ. 53 ರ 1 ರಿಂದ 3 ನೇ ಪುಟದಲ್ಲಿ ಸಬ್ ರಿಜಿಸ್ಟ್ರರ್ ರೌಂಡ್ ಸೀಲು ಪೂರ್ಣ ಪ್ರಮಾಣದಲ್ಲಿ ಇಲ್ಲ ಎಂದರೆ ಸರಿ. ನಿಡಿ. 53 ರ 1 ರಿಂದ 3 ನೇ ಪುಟಗಳಲ್ಲಿ ಸಬ್ ರಿಜಿಸ್ಟ್ರರ್ ರೌಂಡ್ ಸೀಲು ಇಲ್ಲ ಎಂದರೆ ಹಿಂಬದಿಯಲ್ಲಿ ಇದೆ ಎನ್ನುತ್ತಾರೆ. ನಿಡಿ. 53 1 ರಿಂದ 3 ನೇ ಪುಟದಲ್ಲಿ ಇರುವ ಸೀಲು ಬೇರೆ ಸಂಸ್ಥೆಗೆ ಸೇರಿದ ಸೀಲು ಇದ್ದು ಅದನ್ನುದಾಖಲೆ ಸೃಷ್ಟಿಸುವ ಉದ್ದೇಶದಿಂದ ಹಾಗೆ ಅರ್ಧ ಸೀಲು ಹಾಕಲಾಗಿದೆ ಎಂದರೆ ಸರಿಯಲ್ಲ. ನಿಡಿ. 53 ರ ಪ್ರತಿ ಪುಟಗಳಲ್ಲೂ ಸಬ್ ರಿಜಿಸ್ಟ್ರಾರ್ ರವರ ಪದಚಿತ ಸಹಿ ಆಗಲಿ ಅಥವಾ ಸೀಲು ಆಗಲಿ ಇಲ್ಲ ಎಂದರೆ ಸಾಕ್ಷಿ ಸಬ್ ರಿಜಿಸ್ಟ್ರಾರ್ ಹೇಗೆ ಸಹಿ ಮಾಡುತ್ತಾರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನಿಡಿ. 1 ರಲ್ಲಿರುವ ಚಕ್ಕುಬಂದಿಯನ್ನು ಬರವಣಿಗೆ ಮತ್ತು ಟೈಪ್ ಸಹ ಮಾಡಿರುವುದು ಇದ್ದು ನಿಡಿ. 53 ರಲ್ಲಿರುವ ಚಕ್ಕುಬಂದಿಯಲ್ಲಿ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ, ಎರಡೂ ಒಂದೇ ರೀತಿ ಇರುತ್ತದೆ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.